## ಕಲ್ಲಿನ ಬಾನಿಯಲ್ಲಿ ಪುಟಾಣಿ ತೋಟ

ಹಿಂದೆಲ್ಲಾ ಕಲ್ಲಿನ ಬಾನಿಗಳನ್ನು ಕೊಟ್ಟಿಗೆಯಲ್ಲಿ (ಜಾನುವಾರು ಕಟ್ಟುವ ಸ್ಥಳ) ಇಡುತ್ತಿದ್ದರು. ಕಲ್ಲಿನ ಬಾನಿಗಳಲ್ಲಿ ಜಾನುವಾರುಗಳು ಕುಡಿಯಲೆಂದು ಸದಾ ನೀರು ತುಂಬಿಡುತ್ತಿದ್ದರು.

ಈಗ ಆ ಪದ್ಧತಿ ಮಾಯವಾಗಿ, ಆ ಜಾಗಕ್ಕೆ ಪ್ಲಾಸ್ಟಿಕ್ ಬಕೆಟ್ ಬಂದಿದೆ. ಆದರೆ ಇಲ್ಲೊಂದು ಕಲ್ಲಿನ ಬಾನಿಯು, ಹೂವಿನ ಗಿಡ ಹಾಗೂ ಅಂತರಗಂಗೆಯಿಂದ ತುಂಬಿ, ಕೊಟ್ಟಿಗೆಯಿಂದ ತುಳಸಿ ಕಟ್ಟೆ ಇರುವ ಅಂಗಳಕ್ಕೆ ಬಂದು ಕುಳಿತಿದೆ. ಒಂದು ರೀತಿಯಲ್ಲಿ ಹಳೆಯ ವಸ್ತು ಮೂಲೆಗುಂಪಾಗದೆ ಹೂವಿನಿಂದ ತುಂಬಿರುವುದು ಖುಷಿಯ ವಿಚಾರ. ಇದು ಕಂಡಿದ್ದು ಹಾರೋಗೊಳಿಗೆ ಪದ್ಮನಾಭ ಅವರ ಮನೆಯಲ್ಲಿ.

–ಹೆಚ್.ಬಿ. ಪ್ರಮೀಳಾ ಹಾರೋಗೊಳಿಗೆ,
ಶಿವಮೊಗ್ಗ





## ಸೀರೆಯ ಅಲಂಕಾರ

ಇದೇನು ಸೀರೆ ಅಂಗಡಿ ಅಂದುಕೊಂಡಿರಾ? ನಾನೂ ಹಾಗೇ ತಿಳಿದಿದ್ದೆ. ಆದರೆ ಇದು ಸೀರೆ ಅಂಗಡಿಯಲ್ಲ. ಇರುವ ಬಟ್ಟೆಗಳನ್ನೆಲ್ಲ ಬಳಸಿಕೊಂಡು ಸುಂದರವಾಗಿ ಹೇಗೆ ಅಲಂಕರಿಸಬಹುದು ಎನ್ನುವುದಕ್ಕೆ ಈ ಚಿತ್ರ ಉದಾಹರಣೆ. ಇತ್ತೀಚೆಗೆ ಅಪ್ಪನೊಂದಿಗೆ ಹೊಳಲ್ಕೆರೆಗೆ ಹೋಗಿದ್ದೆ. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ನನಗೆ ಹಳ್ಳಿಯ ಪರಿಚಯವಿರಲಿಲ್ಲ. ಅಲ್ಲಿಗೆ ಹೋದಾಗ ಒಂದು ಮನೆಯನ್ನು ಹೀಗೆ ಅಲಂಕರಿಸಿದ್ದರು. ಅಲ್ಲಿಯ ಜನರನ್ನು ಕೇಳಿದಾಗ ಇತ್ತೀಚೆಗೆ ಇಲ್ಲಿ ಊರ ಜಾತ್ರೆ ಪ್ರಯುಕ್ತ ಸಿಡಿ (ಬೆಂಕಿಯಲ್ಲಿ ನಡೆಯುವುದು) ಕಾರ್ಯಕ್ರಮ ನಡೆದಿತ್ತು. ಅದಕ್ಕೆ ಸಿಡಿ ಮಾಡುವ ಈ ಮನೆಯನ್ನು ಹೀಗೆ ಅಲಂಕರಿಸಿದ್ದೆವು ಎಂದರು. ಹೆಚ್ಚಿನ ಖರ್ಚೂ ಇಲ್ಲ, ಪ್ಲಾಸ್ಟಿಕ್ ಬಳಕೆಯೂ ಇಲ್ಲದೆ ತಮ್ಮಲ್ಲಿದ್ದ ಬಣ್ಣ ಬಣ್ಣದ ಸೀರೆಗಳನ್ನೇ ಒಟ್ಟುಗೂಡಿಸಿ ಮಾಡಿದ ಈ ಅಲಂಕಾರವು ಹಳ್ಳಿ ಜನರ ಸೃಜನಶೀಲತೆಗೆ ಹಿಡಿದ ಕನ್ನಡಿ.

–ಅನನ್ಯ ಮೋಹನ, ಬೆಂಗಳೂರು



## ಹಳೆಕಾಲದ ಆಸ್ತಿ ಪತ್ರ

ಈ ಬರವಣಿಗೆಯನ್ನು ನೋಡಿ ಇದು ಯಾವುದೋ ತಾಳೆಗರಿಯ ಸಂಸ್ಕೃತ ಲಿಪಿ ಎನಿಸುತ್ತದೆ ಅಲ್ಲವೇ? ಖಂಡಿತ ಅಲ್ಲ. ಇದು ನಮ್ಮ ಅಚ್ಚ ಕನ್ನಡ. 1912ರಲ್ಲಿ ಒಂದು ಅರಳಿ ಮರವನ್ನು ಸಾಕ್ಷಿಯಾಗಿರಿಸಿ ಆಸ್ತಿಯನ್ನು ಮಾರಿದ ಪತ್ರವಿದು. ಇದನ್ನು ಓದುವುದು ನಮಗೆ ಕಷ್ಟ. ಆದರೆ, ಮೈಸೂರಿನ ಪತ್ರಬರಹಗಾರರಾದ ದೇವರಾಜುರವರು ಸುಲಲಿತವಾಗಿ ಓದಿ ಹೇಳಿದ್ದು ನನಗಂತೂ ಅಚ್ಚರಿ ಮೂಡಿಸಿತು. ಕೋರ್ಟಿಗೆ ನೀಡಲು ಇದನ್ನು ಅರ್ಥವಾಗುವ ಕನ್ನಡಕ್ಕೆ ಬದಲಾಯಿಸಿ ಅವರು ಟೈಪ್ ಮಾಡುತ್ತಿದ್ದಾಗ ನನ್ನ ಕಣ್ಣಿಗೆ ಬಿತ್ತು. ಮನುಷ್ಯರೇ ಸಾಕ್ಷಿಯಾಗಿದ್ದರೂ ಸತ್ಯ ಉಳಿಯದ ಈ ಯುಗದಲ್ಲಿ, ಅರಳಿಮರವು ಸಾಕ್ಷಿಯಾಗಿತ್ತೇ ಎಂಬುದು ಅಚ್ಚರಿ ವಿಚಾರ. ಈ ಲಿಪಿ ಬರೆದ ವಿಧಾನವಂತೂ ಸೋಜಿಗವೆನಿಸಿತು.

–ವೇದಾವತಿ ಎಂ., ಕೆ.ಆರ್. ಪೇಟೆ